ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	999 (1244)
ಸದಸ್ಯರ ಹೆಸರು	:	ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	07.03.2022
ಉತ್ತರಿಸುವವರು	:	ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಿಂದ ಸಾರ್ವಜನಿಕರಿಗೆ ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಬಂದಿದೆ. ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:- 1. ಹುಲಿ ಉಪಟಳ ಹೆಚ್ಚಾಗಿರುವ ಬಾಧಿತ ಪ್ರದೇಶಗಳಲ್ಲಿ ಕ್ಯಾಮರಾ ಟ್ರ್ಯಾಪ್ ಗಳನ್ನು ಅಳವಡಿಸಿ ಹುಲಿಗಳ ಚಲನ ವಲನಗಳನ್ನು ಪತ್ತೆಹಚ್ಚುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. 2. ಪದೇ ಪದೇ ನಿರ್ದಿಷ್ಟ ಪ್ರದೇಶದಲ್ಲಿ ಹುಲಿ ದಾಳಿಯಿಂದ ಸಾಕು ಪ್ರಾಣಿಗಳ ಪ್ರಾಣ ಹಾನಿ ಸಂಭವಿಸುತ್ತಿರುವುದು ಕಂಡುಬಂದಲ್ಲಿ ಇಲಾಖಾ ಆನೆಗಳನ್ನು ಉಪಯೋಗಿಸಿಕೊಂಡು ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ. 3. ನುರಿತ ಇಲಾಖಾ ಸಿಬ್ಬಂದಿ ಮತ್ತು ಪರಿಣಿತರು ಒಳಗೊಂಡ ತಂಡವನ್ನು ರಚಿಸಿ ಹುಲಿಯ ಚಲನ-ವಲನಗಳನ್ನು ನಿಗಾವಹಿಸಲಾಗುತ್ತಿರುತ್ತದೆ. 4. ಉಪಟಳ ಹೆಚ್ಚಾಗಿರುವ ಪ್ರದೇಶದಲ್ಲಿ ಅಳವಡಿಸಲಾಗಿರುವ ಕ್ಯಾಮರಾ ಟ್ರ್ಯಾಪಗಳಲ್ಲಿ ಸೆರೆಸಿಕ್ಕ ಹುಲಿಯ ಛಾಯಚಿತ್ರಗಳನ್ನು ಅನುಸರಿಸಿ ಇಲಾಖೆಯಲ್ಲಿರುವ ಹುಲಿಕೋಶ ಇವರು ನೀಡಿದ ತಾಂತ್ರಿಕ ವರದಿಯನುಸಾರ ಉಪಟಳ ನೀಡುತ್ತಿರುವ ಹುಲಿಯನ್ನು ನಿರ್ದಿಷ್ಟವಾಗಿ ಗುರುತಿಸಿ ಸೆರೆಹಿಡಿಯಲಾಗುತ್ತಿದೆ. ಇದರಂತೆ ಕಳೆದ 2 ವರ್ಷದಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಹುಲಿಗಳನ್ನು ಸೆರೆಹಿಡಿಯಲಾಗಿದೆ.

.....2

<table>
<tr><th>ಕ್ರ.
ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

- ಪೊನ್ನಂಪೇಟ ವಲಯ ವ್ಯಾಪ್ತಿಯ ಕುಮಟೂರು ಗ್ರಾಮದಲ್ಲಿ ದಿನಾಂಕ: 20-05-2020ರಂದು ಒಂದು ಹುಲಿಯನ್ನು ಸೆರೆಹಿಡಿಲಾಗಿರುತ್ತದೆ.
- ತಿತಿಮತಿ ವಲಯ ವ್ಯಾಪ್ತಿಯ ಕುಮಟೂರು ಗ್ರಾಮದಲ್ಲಿ ದಿನಾಂಕ: 23-12-2020 ರಂದು ಒಂದು ಹುಲಿಯನ್ನು ಸೆರೆಹಿಡಿಯಲಾಗಿರುತ್ತದೆ.
- ಪೊನ್ನಂಪೇಟೆ ವಲಯ ವ್ಯಾಪ್ತಿಯ ಟಿ.ಶೆಟ್ಟಿಗೇರಿ ಕುಮಟೂರು ಗ್ರಾಮದಲ್ಲಿ ದಿನಾಂಕ: 20-02-2021ರಂದು ಒಂದು ಹುಲಿಯನ್ನು ಸೆರೆಹಿಡಿಯಲಾಗಿರುತ್ತದೆ.

</td></tr>
<tr><td>ಆ)</td><td>ಕಳೆದ 03 ವರ್ಷಗಳಲ್ಲಿ ಹುಲಿ ದಾಳಿಗೆ ಕೊಡಗು ಜಿಲ್ಲೆಯಲ್ಲಿ ಎಷ್ಟು ರೈತರು/ ಸಾರ್ವಜನಿಕರು ಮರಣ ಹೊಂದಿರುತ್ತಾರೆ; (ವಿವರ ನೀಡುವುದು)</td><td rowspan="2">ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹುಲಿ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣ ಮತ್ತು ಪಾವತಿಸಿದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:-
<table>
<tr><th>ವರ್ಷ</th><th>ವಿಭಾಗ</th><th>ಗ್ರಾಮ / ವಲಯ</th><th>ಮೃತರ ಹೆಸರು</th><th>ದಯಾತ್ಮಕ ಧನ (ರೂ.ಲಕ್ಷಗಳಲ್ಲಿ)</th></tr>
<tr><td>2019-20</td><td colspan="4">ಇರುವುದಿಲ್ಲ</td></tr>
<tr><td rowspan="3">2020-21</td><td rowspan="3">ವಿರಾಜಪೇಟೆ</td><td>ಕುಮಟೂರು/ ಪೊನ್ನಂಪೇಟೆ</td><td>ಎರವರ ಅಯ್ಯಪ್ಪ</td><td>7.5</td></tr>
<tr><td>ಕುಮಟೂರು/ ಪೊನ್ನಂಪೇಟೆ</td><td>ಬೋಳಕ್ಕ (ಚಿಣ್ಣಿ)</td><td>7.5</td></tr>
<tr><td>ಬೆಳ್ಳೂರು/ ಪೊನ್ನಂಪೇಟೆ</td><td>ರಂಗಸ್ವಾಮಿ</td><td>7.5</td></tr>
<tr><td>2021-22</td><td colspan="4">ಇರುವುದಿಲ್ಲ</td></tr>
</table>
</td></tr>
<tr><td>ಇ)</td><td>ಮರಣ ಹೊಂದಿದವರ ಕುಟುಂಬಕ್ಕೆ ಪರಿಹಾರ ಧನ ವಿತರಿಸಲಾಗಿದೆಯೇ; ಪರಿಹಾರ ನೀಡಿದ್ದಲ್ಲಿ ತಾಲ್ಲೂಕುವಾರು, ಫಲಾನುಭವಿಗಳ ವಿವರ ಒದಗಿಸುವುದು;</td></tr>
<tr><td>ಈ)</td><td>ಕಳೆದ 03 ವರ್ಷಗಳಲ್ಲಿ ಹುಲಿ ದಾಳಿಗೆ ಎಷ್ಟು ಸಾಕು ಪ್ರಾಣಿಗಳು (ಹಸು, ಎಮ್ಮೆ, ಕುರಿ, ಮೇಕೆ) ಸಾವನ್ನಪ್ಪಿವೆ? (ಸಂಪೂರ್ಣ ವಿವರ ನೀಡುವುದು)</td><td>ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹುಲಿ ದಾಳಿಯಿಂದ ಸಾವನ್ನಪ್ಪಿದ ಸಾಕುಪ್ರಾಣಿ ಪ್ರಕರಣಗಳು ಮತ್ತು ಪಾವತಿಸಿದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಪ್ರಕರಣ ಗಳ ಸಂಖ್ಯೆ</th><th>ದಯಾತ್ಮಕ ಧನ (ರೂ.ಗಳಲ್ಲಿ)</th></tr>
<tr><td>2018-19</td><td>46</td><td>4,28,500</td></tr>
<tr><td>2019-20</td><td>55</td><td>5,70,000</td></tr>
<tr><td>2020-21</td><td>77</td><td>8,70,000</td></tr>
<tr><td>2021-22 (ಫೆಬ್ರುವರಿ ಅಂತ್ಯಕ್ಕೆ)</td><td>31</td><td>8,90,000</td></tr>
</table>
</td></tr>
</table>

ಸಂಖ್ಯೆ: ಅಪಜೀ 45 ಎಫ್‌ಡಬ್ಲ್ಯೂಎಲ್ 2022

(ಉಮೇಶ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು